**ಅವಳಿಗೆ ಲೋಕ ನೋಡುವ ಅವಕಾಶಗಳು ವಿಸ್ತರಿಸಿದ ಹಾಗೆ ಅವಳ ಅರಿವು ವಿಸ್ತಾರವಾಯಿತು. ಪುರುಷ ದ್ವೇಷ ಶುರುವಾದದ್ದು ಅಲ್ಲಿಂದಲೇ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮೊದಲ ಉಪಕರಣವಾಗಿ ಬಳಕೆಯಾಗೋದೇ ಪುರುಷ. ಉಪಕರಣಕ್ಕೂ ಮೂಲಕ್ಕೂ ವ್ಯತ್ಯಾಸ ಗೊತ್ತಿಲ್ಲದೆ ಹೋದಾಗ ಉಪಕರಣದ ಬಗ್ಗೆ ದ್ವೇಷ ಬೆಳೆಯಿತು. ಇದು ಗಂಡು ಹೆಣ್ಣಿನ ಪರಸ್ಪರ ದ್ವೇಷಕ್ಕೆ ಕಾರಣವಾಯಿತು.**

ಬಿಟ್ಟರೆ ಸಾಹಿತ್ಯ, ಓದು, ಬರವಣಿಗೆ ಯಾವುದನ್ನೂ ಗಂಭೀರವಾಗಿ ತೆಗೆದುಕೊಂಡೇ ಇರಲಿಲ್ಲ. ಬರವಣಿಗೆಯನ್ನು ಒಂದು ಪ್ರಯೋಗವಾಗಿ ಮಾಡಿದೆ ಅಷ್ಟೇ. ನಾನು ಬರವಣಿಗೆ ಶುರುಮಾಡಿದ್ದೆ ನನಗೆ ಐವತ್ತು ವರ್ಷ ದಾಟಿದ ಮೇಲೆ. ಬರೆಯಲೋ ಬೇಡವೋ ಅನ್ನೋ ರೀತಿಯಲ್ಲಿ ಮಾಡುತ್ತಿದ್ದೆ. ಬರೆದಿದ್ದನ್ನು ಗುಟ್ಟಾಗಿ ಬಚ್ಚಿಡುತ್ತಿದ್ದೆ. ಸ್ತ್ರೀವಾದ ಓದಲು ಶುರುಮಾಡಿದ ಮೇಲೆ ಅದಕ್ಕೆ ಸಂಬಂಧಿಸಿದಂತೆ ಕೆಲವು ಲೇಖನಗಳನ್ನು ಬರೆದಿಟ್ಟುಕೊಂಡಿದ್ದೆ. ಅದು 'ಚಹರೆ' ಅಂತ ಪುಸ್ತಕವಾಗಿ ಪ್ರಕಟವಾಯಿತು. ಆಮೇಲೆ ಹೀಗೆ ಆಗೀಗ ಅನುವಾದಗಳನ್ನು ಮಾಡುತ್ತಾ ಹೋದೆ.

**◆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನ ಕೇಂದ್ರದ ಅನುಭವಗಳು...**

ಕನ್ನಡ ವಿವಿಯಲ್ಲಿ ಮಹಿಳಾ ಅಧ್ಯಯನ ಕೇಂದ್ರ ಶುರುವಾಯಿತು. ಇಡೀ ಬೋಧಕ ಸಿಬ್ಬಂದಿ ವರ್ಗದಲ್ಲಿ ನಾನೊಬ್ಬಳೇ ಮಹಿಳೆ ಇದ್ದಿದ್ದು. ನನ್ನನ್ನ ಆ ಕೇಂದ್ರಕ್ಕೆ ಮುಖ್ಯಸ್ಥಳನ್ನಾಗಿ ಕಳುಹಿಸಿದರು. ಆ ಅಧ್ಯಯನ ಕೇಂದ್ರಕ್ಕೊಂದು ರೂಪುಕೊಡುವ ಜವಾಬ್ದಾರಿ ಹೆಗಲೇರಿತು. ನನ್ನ ಸ್ತ್ರೀವಾದಿ ಅಧ್ಯಯನವು ಮೊದಲಾಯಿತು. ಆ ವೇಳೆಗೆ ಕರ್ನಾಟಕದಲ್ಲಿ ವಿಜಯಾ ದಬ್ಬೆ, ಸುಮಿತ್ರಾ ಬಾಯಿ ಇವರೆಲ್ಲ ಸ್ತ್ರೀವಾದದ ಬಗ್ಗೆ ಮಾತಾಡ್ತಿದ್ದರು, ಬರೀತಿದ್ದರು. ಅಮೆರಿಕನ್ ಫೆಮಿನಿಸಂ ಬಗ್ಗೆ ಇಲ್ಲಿ ಚರ್ಚೆಗಳಾಗ್ತಿದ್ದವು. ಸ್ತ್ರೀವಾದ ಅಂದರೆ ಹೆಂಗಸರ ಪರವಾಗಿ, ಸಹಾನುಭೂತಿಯಿಂದ ಮಾತಾಡಬೇಕು. ಹೆಂಗಸರ ಪರವಾಗಿ ಅವರಿಗಾಗುವ ಸಾಮಾಜಿಕ ಅನ್ಯಾಯಗಳ ವಿರುದ್ಧ ಮಾತಾಡಬೇಕು ಅನ್ನೋ ತರಹದ ಪ್ರಾಥಮಿಕ ಹಂತದ ಸ್ತ್ರೀವಾದವಿತ್ತು. ಆ ವೇಳೆಗೆ ಅಮೆರಿಕದಲ್ಲೆಲ್ಲ ಸ್ತ್ರೀವಾದ ಶುರುವಾಗಿ ನೂರು ವರ್ಷಗಳ ಮೇಲಾಗಿತ್ತು. ಈ ತರಹದ ಸ್ತ್ರೀವಾದಿ ಹೋರಾಟಗಳು ಸ್ವತಂತ್ರವಾಗಿಯಂತೂ ನಡೀತಿರಲಿಲ್ಲ.

ಬಹುಶಃ ಕನ್ನಡದಲ್ಲಂತೂ ಸಾಹಿತ್ಯದ ವಿದ್ಯಾರ್ಥಿಗಳು ವಿಮರ್ಶೆಯ ಅಂಗವಾಗಿ ಸ್ತ್ರೀವಾದಿ ವಿಮರ್ಶೆ ಓದುತ್ತಿದ್ದರು. ಸ್ತ್ರೀವಾದಿ ವಿಮರ್ಶೆ ಅಂದರೆ ಯಾವುದೇ ಪಠ್ಯ ತೆಗೆದುಕೊಂಡರೂ ಮಹಿಳೆಯರ ಪರವಾಗಿರುವಂತಹ ವಿಷಯಗಳು ಯಾವುದು? ವಿರುದ್ಧವಾದದು ಯಾವುದು ಅಂತ ಪಟ್ಟಿ ಮಾಡುವುದು ಇಷ್ಟೇ ನಡಿತಿದ್ದದ್ದು.

ಆ ವೇಳೆಗಾಗಲೇ ನಲವತ್ತೈದು ದಾಟಿದ್ದ ನನಗೆ ಜೀವನಾನುಭವದಿಂದಲೇ ಹೆಂಗಸರು ಕಷ್ಟ ಪಡ್ತಿದಾರೆ. ಗಂಡಸರಿಂದ ಕಷ್ಟ ಆಗ್ತಿದೆ ಅನ್ನೋದು ಗೊತ್ತಾಗಿತ್ತೇ ಹೊರತು. ಈ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಗಂಡು ಇಬ್ಬರಿಗೂ ಕಷ್ಟವಾಗ್ತಿದೆ ಅನ್ನೋದು ಅರ್ಥವಾಗಿರಲಿಲ್ಲ. ಇದಕ್ಕೆ ನಮ್ಮ ಜ್ಞಾನವಲಯಗಳು ರೂಪಿಸಿರೋ ವ್ಯವಸ್ಥೆಯಲ್ಲಿ ಅವಕಾಶವೇ ಇಲ್ಲ. ಇವತ್ತಿಗೂ ಸ್ತ್ರೀವಾದವನ್ನು ಈ ನೆಲೆಯಲ್ಲಿ ನಿಂತು ಮಾತಾಡ್ತಿರೋರು ಕಡಿಮೆ.